**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.123/2024**

ಪ್ರಾ.ಸಾ. 7

ಚಾ.ಸಾ. 15

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 03.12.2025**

ಸಾಕ್ಷಿದಾರರ ಹೆಸರು ಹರ್ಷಕುಮಾರ್.ಕೆ.

ತಂದೆಯ ಹೆಸರು ಕೃಷ್ಣೇಗೌಡ

ವಯಸ್ಸು 40 ವರ್ಷ

ಉದ್ಯೋಗ ಸಿವಿಲ್ ಇಂಜಿನೀಯರ್

ವಾಸ ಚನ್ನಪಟ್ಟಣ

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ಮೃತ ರಾಕೇಶ ನನಗೆ ಗೊತ್ತು. ಆತ ನನ್ನ ಸ್ನೇಹಿತ. ಆತ ಈಗ ಬದುಕಿಲ್ಲ. ದಿನಾಂಕ 27.06.2019 ರಂದು ವಡ್ಡರದೊಡ್ಡಿಯಲ್ಲಿ ಆತನ ಕೊಲೆಯಾಗಿದೆ. ದಿನಾಂಕ 28.06.2019 ರಂದು ಬೆಳಗ್ಗೆ 6.30 ಗಂಟೆಗೆ ನನ್ನ ಸ್ನೇಹಿತ ಪ್ರತಾಪ್ ಫೋನು ಮಾಡಿ ರಾಕೇಶನ ಕೊಲೆಯಾಗಿದೆ ಎಂದು ತಿಳಿಸಿದ. ವಿಷಯ ತಿಳಿದು ನಾನು ವಡ್ಡರದೊಡ್ಡಿಯ ರಾಕೇಶನ ಶವ ಬಿದ್ದ ಸ್ಥಳ ನಿಡಘಟ್ಟದಿಂದ ವಡ್ಡರದೊಡ್ಡಿಗೆ ಹೋಗುವ ರಸ್ತೆಗೆ ಹೋದೆ. ರಸ್ತೆಯಲ್ಲಿ ರಾಕೇಶನ ಶವ ಬಿದ್ದಿತ್ತು. ಆತನ ಮುಖ ಮತ್ತು ಎದೆಯ ಮೇಲೆ ಮಚ್ಚಿನಿಂದ ಆದ ರೀತಿಯ ಗಾಯಗಳು ಮತ್ತು ಕಲ್ಲು ಎತ್ತಿ ಹಾಕಿದರೆ ಆಗುವ ರೀತಿಯ ಗಾಯಗಳು ಇದ್ದವು. ನಾನು ಹೋದಾಗ ಅಲ್ಲಿ ನಮ್ಮ ಸ್ನೇಹಿತರು ಹಾಗೂ ಪೊಲೀಸರು ಇದ್ದರು. ನಾನು ಅಲ್ಲಿಗೆ ಹೋದಾಗ 7.15 ರಿಂದ 7.30 ಗಂಟೆಯಾಗಿತ್ತು. ಅಲ್ಲಿ ಚಾಸಾ.14 ಶ್ರೀಧರ ಮತ್ತು ಚಾಸಾ.16 ಮಧುಸೂದನ ಕೂಡ ಇದ್ದರು. ಅಲ್ಲಿ ಪೊಲೀಸರು ಶವವನ್ನು ಪರಿಶೀಲಿಸಿ ಮೃತ ದೇಹವನ್ನು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಸಾಗಿಸಿದರು. ನಾನು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಹೋದೆ. ಅಲ್ಲಿ 11.15 ಗಂಟೆಯಿಂದ 1.15 ಗಂಟೆವರೆಗೆ ಪೊಲೀಸರು ಶವವನ್ನು ಪರಿಶೀಲಿಸಿ ಶವ ಪಂಚನಾಮೆ ಮಾಡಿದರು. ನಾನು ಸದರಿ ಪಂಚನಾಮೆಗೆ ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ಶವ ಪಂಚನಾಮೆಗೆ ಮೊದಲು ನನಗೆ ನೋಟಿಸು ಕೊಟ್ಟಿದ್ದಾರೆ. ಸಾಕ್ಷಿ ನೋಟಿಸನ್ನು ನೊಡಿ

ಗುರುತಿಸಿದ್ದು ಅದನ್ನು ನಿಪಿ.11 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.11ಎ ಎಂದು ಗುರುತಿಸಲಾಯಿತು. ನನ್ನ ಜೊತೆ ಚಾಸಾ.14 ಮತ್ತು ಇನ್ನೊಬ್ಬ ವ್ಯಕ್ತಿ ಮತ್ತು ಮತ್ತೊಬ್ಬರು ಶವ ಪಂಚನಾಮೆಗೆ ಸಹಿ ಮಾಡಿದ್ದಾರೆ. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಶವ ಪಂಚನಾಮೆಯನ್ನು ಗುರುತಿಸಿದ್ದು ಅದನ್ನು ನಿಪಿ.12 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.12ಎ ಎಂದು ಗುರುತಿಸಲಾಯಿತು. ನಿಪಿ.12ರ ಕಾಲಕ್ಕೆ ಫೊಟೋ ತೆಗೆದಿದ್ದಾರೆ. ಸಾಕ್ಷಿಗೆ ನಿಪಿ.8 ಫೊಟೋವನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ನಿಪಿ.12 ಶವ ಪಂಚನಾಮೆ ಕಾಲಕ್ಕೆ ತೆಗೆದಿದ್ದು ಎಂದು ನುಡಿಯುತ್ತಾರೆ. (ಸಾಕ್ಷಿ ಎಸ್ ಸಿ ಸಂಖ್ಯೆ 54/2020ರ ನಿಪಿ.4 ಮೂಲ ಛಾಯಚಿತ್ರವನ್ನೂ ಕೂಡ ನೋಡಿ ಗುರುತಿಸಿರುತ್ತಾರೆ.) ಅದರಲ್ಲಿ ನಾನು ಮತ್ತು ಚಾಸಾ.14 ಇದ್ದೇವೆ. ಎರಡು ದಿವಸದ ಬಳಿಕ ರಾಕೇಶನ ಕೊಲೆಯನ್ನು ಅಭಿಷೇಕ್, ಅಕ್ಷಯ್, ಸಿದ್ದ, ಮಹದೇವ್ ಮತ್ತು ಅವರ ಸ್ನೇಹಿತರು ಮಾಡಿದ್ದಾರೆಂದು ಪ್ರತಾಪ್ ನನಗೆ ಹೇಳಿದ. ಈ ಬಗ್ಗೆ ಪೊಲೀಸರು ತನಿಖೆ ನಡೆಸಿ ನನ್ನ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಹೆಚ್ ಬಿ ಪಿ ವಕೀಲರಿಂದಃ**

1. ನಿಪಿ.8 ಫೊಟೋವನ್ನು ನಾನು ಇಂದು ಪ್ರಥಮ ಬಾರಿ ನೋಡಿದ್ದೇನೆಂದರೆ ಸರಿಯಲ್ಲ. ರಾಕೇಶನ ಕೊಲೆಯನ್ನು ಆರೋಪಿಗಳು ಮಾಡಿದ್ದಾರೆಂದು ಪ್ರತಾಪ ಹೇಳಿದ್ದರಿಂದ ಅವರ ವಿರುದ್ಧ ಸಾಕ್ಷಿ ಹೇಳುತ್ತಿದ್ದೇನೆ ವಿನಃ ನನಗೆ ಆರೋಪಿಗಳೇ ಕೊಲೆ ಮಾಡಿದ್ದಾರೆಂದು ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಕೊಲೆಯಾದ ಎರಡು ದಿವಸದೊಳಗೆ ಪ್ರತಾಪನಿಂದ ವಿಷಯ ತಿಳಿದ ಬಳಿಕ ನಾನು ಪೊಲೀಸರನ್ನು ಭೇಟಿಯಾಗಿಲ್ಲ ಮತ್ತು ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ಪೊಲೀಸರ ಮಾತುಕೇಳಿ ವಿಷಯ ತಿಳಿಯಿತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.